# ಭವರೋಗ ವೈದ್ಯರಾಗಿ ಶ್ರೀರಾಮಕೃಷ್ಣರು

ಶ್ರೀಮತಿ ಕೆ.ಎಸ್. ಚಂದ್ರಾ

ಶ್ರೀರಾಮಕೃಷ್ಣರು ತಮ್ಮ ಭಕ್ತರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ತಮ್ಮದೇ ವಿಶಿಷ್ಟ ಮಾರ್ಗವನ್ನು ಅನುಸರಿಸುತ್ತಿದ್ದರು. ಇದನ್ನು ಉದಾಹರಣೆಗಳ ಮೂಲಕ ವಿವರಿಸುತ್ತಾರೆ ಶ್ರೀಮತಿ ಚಂದ್ರಾ ಅವರು. ಇವರು ಬೆಂಗಳೂರಿನ ಎನ್.ಎಮ್.ಕೆ.ಆರ್.ವಿ ಮಹಿಳಾ ಕಾಲೇಜಿನಲ್ಲಿ ಮನಶ್ಶಾಸ್ತ್ರದ ಉಪನ್ಯಾಸಕಿಯಾಗಿದ್ದಾರೆ.

ಧರ್ಮದ ಗ್ಲಾನಿಯಾದಾಗಲೆಲ್ಲ ಭಗವಂತನು ಮಾನವನ ಉದ್ಧಾರಕ್ಕಾಗಿ ತನ್ನ ಪರಮೋತ್ಕೃಷ್ಟ ಸ್ಥಾನದಿಂದ ಅವತೀರ್ಣನಾಗಿ ಧರೆಯಲ್ಲಿ ಅವತರಿಸುತ್ತಾನೆ. ಹೀಗೆ ಭಗವಂತನು ಅವತರಿಸುವಾಗ ಪ್ರತಿ ಯುಗದಲ್ಲಿಯೂ ಒಂದು ಸಂದೇಶವನ್ನು ಬಿಟ್ಟುಹೋಗುತ್ತಾನೆ.

ತ್ರೇತಾಯುಗದಲ್ಲಿ ಶ್ರೀರಾಮನು ಓರ್ವ ಆದರ್ಶಪುರುಷನಾಗಿ ಧರ್ಮವನ್ನು ನಿತ್ಯಜೀವನದಲ್ಲಿ ಯಾವ ರೀತಿ ಆಚರಿಸಬಹುದು ಎಂಬುದನ್ನು ನಡೆದು ತೋರಿಸಿಕೊಟ್ಟಿರುವನು. ಶ್ರೀರಾಮನನ್ನು **ರಾಮೋ ವಿಗ್ರಹವಾನ್ ಧರ್ಮಃ** ಎಂದು ಕರೆಯಲಾಗಿದೆ. ಅಂದರೆ **ಧರ್ಮದ ಮೂರ್ತರೂಪವೇ ಶ್ರೀರಾಮ** ಎಂದು ಅರ್ಥ.

ದ್ವಾಪರಯುಗದಲ್ಲಿ ಶ್ರೀಕೃಷ್ಣನು ತನ್ನ ಅಸದೃಶ ಲೀಲಾ ಮಹಿಮೆಗಳಿಂದ ತನ್ನ ಅಸಾಮಾನ್ಯ ದಿವ್ಯತ್ವವನ್ನು ಹೊರಗೆಡಹಿ **ಕೃಷ್ಣಸ್ತು ಭಗವಾನ್ ಸ್ವಯಂ** ಎಂಬ ನುಡಿಗೆ ಆಧಾರನಾದ. ಶ್ರೀಕೃಷ್ಣನು ಸಾರಿದ ಮಹೋನ್ನತ ಸತ್ಯವೆಂದರೆ, ಪ್ರತಿಯೊಬ್ಬರಲ್ಲೂ ದಿವ್ಯತ್ವ ಹುದುಗಿದೆ, ಆದರೆ ಅದನ್ನು ಅವನು ಅರಿಯಬೇಕು, ಇದನ್ನು ಅರಿಯಬೇಕಾದರೆ ಅನೇಕ ಮಾರ್ಗಗಳು ಇವೆ. ಈ ಸತ್ಯವನ್ನು ತನ್ನ ಅಂತರಂಗ ಶಿಷ್ಯನೂ, ಸಖನೂ ಆದ ಅರ್ಜುನನಿಗೆ ರಣರಂಗದಲ್ಲಿ ಗೀತೆಯ ರೂಪದಲ್ಲಿ ಬೋಧಿಸಿದ.

ಇನ್ನು, ಶ್ರೀರಾಮಕೃಷ್ಣರ ವಿಷಯವನ್ನು ತೆಗೆದುಕೊಂಡರೆ ಇವರು ಅವತಾರ ಪುರುಷರೇ, ಮಹರ್ಷಿಗಳೇ ಅಥವಾ ಓರ್ವ ಭವರೋಗ ವೈದ್ಯರೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಶ್ರೀರಾಮಕೃಷ್ಣರ ದಿವ್ಯ ಜೀವನ ಚರಿತ್ರೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಾಗ, ಅವರು ಈ ಮೂವರೂ ಹೌದು, ಹಾಗೂ ಇನ್ನೂ ಹೆಚ್ಚು ಅಂತಲೂ ಹೇಳಬಹುದು. ಪ್ರಸ್ತುತ ಶ್ರೀರಾಮಕೃಷ್ಣರು ಭವರೋಗ ವೈದ್ಯರಾಗಿ ಅಸಂಖ್ಯಾತ ಭಕ್ತರಿಗೆ, ಶಿಷ್ಯರಿಗೆ ಅವರವರ ಹಂತದಲ್ಲಿ, ಅವರಿಗೆ ಬೇಕಾದ ಚಿಕಿತ್ಸೆಯನ್ನು ಹೇಗೆ ನೀಡಿದರು ಎಂಬುದನ್ನು ಅರಿಯಲು ಪ್ರಯತ್ನಿಸೋಣ.

ಆಧುನಿಕ ಮಾನವನ ಜೀವನವು ಆತಂಕ, ಅತೃಪ್ತಿ, ಖಿನ್ನತೆ ಹಾಗೂ ಸಂಶಯಗಳಿಂದ ಕೂಡಿದ್ದು, ಮನುಷ್ಯ ತನ್ನ ಬದುಕಿನ ಗುರಿಯನ್ನು ಮರೆತು, ಬೇಡದ ಸಮಸ್ಯೆಗಳನ್ನು ತಾನೇ ಉಂಟುಮಾಡಿಕೊಂಡು, ಅವುಗಳಿಂದ ಹೊರಬರುವ ದಾರಿಕಾಣದೆ ತೊಳಲಾಡುತ್ತಿರುವನು. ಈ ಸಮಸ್ಯೆಗಳಿಗೆ ಪರಿಹಾರ ಇಲ್ಲವೇ? ಈ ಪ್ರಶ್ನೆಗೆ ಉತ್ತರ ಖಂಡಿತವಾಗಿ ಪರಿಹಾರ ಉಂಟು ಎಂಬುದೇ ಆಗಿದೆ. ಅದೇ ಶ್ರೀರಾಮಕೃಷ್ಣರ ಜೀವನ, ಸಂದೇಶಗಳ ಅಧ್ಯಯನ, ಕೇವಲ ಅಧ್ಯಯನವಲ್ಲ, ನಿರಂತರ ಪಾರಾಯಣ. ಬರಿಯ ಪಾರಾಯಣವಲ್ಲ. ಅವರ ದಿವ್ಯಜೀವನದ, ತತ್ತ್ವಗಳ ಅನುಕ್ಷಣ ಚಿಂತನ-ಮಂಥನ.

**ಯಸ್ಯ ವೀರ್ಯೇಣ ಕೃತಿನೋ ವಯಂ ಚ ಭುವನಾನಿ ಚ।**
**ರಾಮಕೃಷ್ಣಂ ಸದಾ ವಂದೇ ಶರ್ವಂ ಸ್ವತಂತ್ರಮೀಶ್ವರಮ್ ॥**

**ಯಾರ ಶಕ್ತಿಯಿಂದ ನಾವು ಮತ್ತು ಇಡೀ ಜಗತ್ತು ಧನ್ಯವಾಗುತ್ತಿರುವೆವೊ ಅಂತಹ ಮುಕ್ತ, ಈಶ್ವರ, ಶಿವಸ್ವರೂಪಿ ಶ್ರೀರಾಮಕೃಷ್ಣರಿಗೆ ನನ್ನ ಅನವರತ ಪ್ರಣಾಮಗಳು.** — *ಸ್ವಾಮಿ ವಿವೇಕಾನಂದ.*

"ಮಹಾಪುರುಷರ ಜೀವನವೇ ಅವರ ಸಂದೇಶ." ಅವರು ನುಡಿದ ಮಾತು, ನಡೆದ ರೀತಿ ಮಾಡಿದ ಕೆಲಸ ಎಲ್ಲವೂ ಅರ್ಥಪೂರ್ಣ. ಶ್ರೀರಾಮಕೃಷ್ಣರಂತಹ ಮಹಾಪುರುಷರ ಜೀವನವನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳಲು ನಮಗೆ ಸಾಧ್ಯವಾಗದಿರಬಹುದು. ಆದರೆ ವೈವಿಧ್ಯತೆಯಿಂದ ಕೂಡಿರುವ ಅವರ ದಿವ್ಯ ವ್ಯಕ್ತಿತ್ವದ ಒಂದು ಮುಖವನ್ನಾದರೂ ನಾವು ಅವರ ಕೃಪೆಯಿಂದ ಅರಿಯಲು ಪ್ರಯತ್ನಿಸೋಣ. ಬಾಳಿನಲ್ಲಿ ಬೆಂದು, ನೊಂದು ಅವರಲ್ಲಿಗೆ ಬಂದ, ಬರುತ್ತಿರುವ ಅಸಂಖ್ಯಾತ ಜನರಿಗೆ ಶ್ರೀರಾಮಕೃಷ್ಣರ ದಿವ್ಯ ನುಡಿಗಳು ಸಂಜೀವಿನಿ. ಅವರ ಬಳಿ ಬರುತ್ತಿದ್ದ ಬುದ್ಧಿಜೀವಿಗಳಿಗೆ ಅವರು **ಜ್ಯೋತಿಷಾಂ ಜ್ಯೋತಿಃ**. ಅವರಲ್ಲಿ ಶರಣಾದ ಭಕ್ತರಿಗೆ ಅವರೋರ್ವ ಕಲ್ಪತರು. ಅವರ ಜೀವನ ಸಂದೇಶಗಳನ್ನು ಅವಲಂಬಿಸಿ ಅವರಿಗಾಗಿ ತಮ್ಮ ಬಾಳನ್ನು ಮುಡಿಪಾಗಿಟ್ಟವರಿಗೆ ಅವರು ಮಹಾನ್ ಗುರುಗಳು. ಒಡೆದ ಮನಸ್ಸಿನ, ಭಗ್ನಹೃದಯದ ತಾಪದಿಂದ ಬಳಲಿದವರಿಗೆ ಅವರೋರ್ವ ಅಪೂರ್ವ ವೈದ್ಯರು.

ಸ್ವಾಮಿ ವಿವೇಕಾನಂದರು ತಮ್ಮ ಗುರುಗಳಾದ ಶ್ರೀರಾಮಕೃಷ್ಣರನ್ನು **ಯಾಮಿ ಗುರುಂ ಶರಣಂ ಭವವೈದ್ಯಮ್** ಎಂದು ಹಾಡಿದ್ದಾರೆ. ಇದರ ಅರ್ಥ "ಭವವೈದ್ಯನಾದ ಗುರುವೇ, ನಿನ್ನಲ್ಲಿ ನಾನು ಶರಣು ಹೊಂದುವೆ" ಎಂದಾಗಿದೆ. ಅಂತೆಯೇ ಶ್ರೀರಾಮ

ಕೃಷ್ಣರ ನೇರಶಿಷ್ಯರೂ, ಸ್ವಾಮಿ ವಿವೇಕಾನಂದರ ಸೋದರ ಸಂನ್ಯಾಸಿಯೂ ಆದ ಸ್ವಾಮಿ ಅಭೇದಾನಂದರು ತಮ್ಮ ಸ್ತೋತ್ರ ವೊಂದರಲ್ಲಿ ತಮ್ಮ ಗುರುಗಳನ್ನು ವಂದೇ ಭವೇಶಂ ಭವರೋಗ ವೈದ್ಯಮ್ ಎಂದು ಕೊಂಡಾಡಿದ್ದಾರೆ.

ಶ್ರೀರಾಮಕೃಷ್ಣರು ತಮ್ಮೆಡೆಗೆ ಬರುತ್ತಿದ್ದ ವಿವಿಧ ಸ್ವಭಾವದ ಜನರನ್ನು ಬಹಳ ಸೂಕ್ಷ್ಮರೀತಿಯಲ್ಲಿ ಗಮನಿಸಿ ಅವರ ಬಲಹೀನತೆಯನ್ನೂ ದುಷ್ಪ್ರವೃತ್ತಿಗಳನ್ನೂ ಹೀನ ಸಂಸ್ಕಾರಗಳನ್ನೂ ಪತ್ತೆಹಚ್ಚುತ್ತಿದ್ದರು. ಹಲವರನ್ನು ಅವರು ತಮ್ಮ ಸ್ಪರ್ಶಮಾತ್ರದಿಂದ ಜಾಗೃತಗೊಳಿಸುತ್ತಿದ್ದರು. ಕೆಲವರ ಕೈಯನ್ನು ತೂಗಿ ನೋಡುತ್ತಿದ್ದರು. ಕೆಲವರ ಎದೆಯನ್ನು ಮುಟ್ಟಿ ನೋಡಿ ಅವರು ಆಧ್ಯಾತ್ಮಿಕ ಶಕ್ತಿಯನ್ನು ಸಂಗ್ರಹಿಸಲು ಯೋಗ್ಯರೇ, ಅಲ್ಲವೇ ಎಂಬುದನ್ನು ಪರೀಕ್ಷಿಸುತ್ತಿದ್ದರು. ಕೆಲವರ ಹಣೆ, ಕಣ್ಣುಗಳನ್ನು ಪರೀಕ್ಷಿಸಿ ನೋಡಿ, ಅವರು ಆಧ್ಯಾತ್ಮಿಕ ಸಾಧನೆ ಮಾಡಲು ಅರ್ಹರೇ, ಅಲ್ಲವೇ ಎಂಬುದನ್ನು ನಿರ್ಧರಿಸುತ್ತಿದ್ದರು. ಹೀಗೆ ಅವರು ತಮ್ಮ ಶಿಷ್ಯರ ಹಾಗೂ ಭಕ್ತರ ಉದ್ಧಾರಕ್ಕಾಗಿ ತಮ್ಮದೇ ಆದಂತಹ ವಿಶಿಷ್ಟ ಚಿಕಿತ್ಸಾ ವಿಧಾನಗಳನ್ನು ಬಳಸುತ್ತಿದ್ದರು. ಈ ವಿಧಾನಗಳು ಆಧುನಿಕ ಮನೋವೈಜ್ಞಾನಿಕ ಚಿಕಿತ್ಸಾವಿಧಾನಗಳಾದ ವರ್ತನಾ ಚಿಕಿತ್ಸೆ (Behaviour therapy), ಮನೋವಿಶ್ಲೇಷಣಾ ಚಿಕಿತ್ಸೆ (Psycho analytical therapy), ಹಾಗೂ ಮಾನವೀಯ ಚಿಕಿತ್ಸೆ (Humanistic therapy)—ಇವೆಲ್ಲಕ್ಕಿಂತಲೂ ಅತ್ಯಂತ ಫಲಕಾರಿಯಾಗಿಯೂ ಶಕ್ತಿಯುತವಾಗಿಯೂ ಆದಂತಹ ವಿಧಾನಗಳೆಂದರೆ ಉತ್ಪ್ರೇಕ್ಷೆಯಾಗಲಾರದು.

ಉದಾಹರಣೆಗೆ, ಶ್ರೀರಾಮಕೃಷ್ಣರ ಗೃಹೀಭಕ್ತರಲ್ಲಿ ಅಗ್ರಗಣ್ಯನೂ, ಅತ್ಯಂತ ಪ್ರತಿಭಾಶಾಲಿಯೂ ಆದ ಗಿರೀಶ್‌ಚಂದ್ರ ಘೋಷ್‌ನ ಜೀವನದ ದಿಸೆಯು ಶ್ರೀರಾಮಕೃಷ್ಣರ ಮಾರ್ಗದರ್ಶನದಲ್ಲಿ ಹೇಗೆ ಬದಲಾಯಿತು ಎಂಬುದನ್ನು ಅರಿಯೋಣ. ಗಿರೀಶ ಘೋಷನು ಅತಿಯಾಗಿ ಕುಡಿಯುವ ಚಟವನ್ನು ಬಿಡಲು ಸಾಧ್ಯವಾಗದೆ, ತನ್ನನ್ನು ಆ ಹಿಡಿತದಿಂದ ಶ್ರೀರಾಮಕೃಷ್ಣರೇ ಪಾರು ಮಾಡಬೇಕೆಂದು ಕೇಳಿಕೊಂಡಾಗ, ಅವರು ಮೊದಲು ಅವನ ಅಂತಃಶಕ್ತಿಯನ್ನು ಪರೀಕ್ಷಿಸುತ್ತಾರೆ. ಅವನಲ್ಲಿ ಹುದುಗಿದ್ದ ಭಕ್ತಿಯನ್ನು ಹೊರತೆಗೆದು, ಅಮೃತಸ್ವರೂಪನಾದ ಭಗವಂತನಲ್ಲಿ ಪ್ರೇಮವನ್ನು ಬೆಳೆಸಿಕೊಂಡಾಗ, ಪ್ರಾಪಂಚಿಕ ಸುಖದಿಂದ ದೊರೆಯುವ ಸುಖ ಎಷ್ಟು ಅಲ್ಪವಾದದ್ದು ಎಂಬುದನ್ನು ಅವನೇ ಹಂತ ಹಂತವಾಗಿ ಅರಿಯುವಂತೆ ಮಾಡಿದರು. ಹೀಗೆ ಮಾಡಬೇಕಾದರೆ, ಶ್ರೀರಾಮಕೃಷ್ಣರು ಗಿರೀಶನು ತನ್ನ ಸಮಸ್ಯೆಯನ್ನು ತಾನೇ ಎದುರಿಸುವ ಶಕ್ತಿಯನ್ನು ಹೊಂದುವಂತೆ ಅವನಲ್ಲಿ ನವ ಉತ್ಸಾಹವನ್ನೂ ಭರವಸೆಯನ್ನೂ ತುಂಬುತ್ತಾರೆ. ಮೊದಲಿಗೆ ತಾವೇ ಅವನಿಗೆ ಊರುಗೋಲಾಗಿ ಅವನ ಜವಾಬ್ದಾರಿಯನ್ನು ವಹಿಸಿಕೊಂಡು, ಅವನು ಸಂಪೂರ್ಣವಾಗಿ ಬದಲಾಗುವಂತೆ ಮಾಡುತ್ತಾರೆ. ಇಂತಹ ಚಿಕಿತ್ಸೆಯಿಂದ ಗಿರೀಶನ ಬಲಹೀನತೆ ನಿವಾರಣೆ ಹೊಂದುವುದರ ಜೊತೆಗೆ ಅವನಿಗೆ ಶ್ರೀರಾಮಕೃಷ್ಣರ ಬಗ್ಗೆ ಅತ್ಯಂತ ದೃಢವಾದ ಶ್ರದ್ಧಾಭಕ್ತಿಗಳು ಉಂಟಾಗುತ್ತವೆ.

"ಮಾಸ್ಟರ್ ಮಹಾಶಯ" ಎಂದು ಪ್ರಸಿದ್ಧನಾದ ಮಹೇಂದ್ರನಾಥ ಗುಪ್ತನನ್ನು ಶ್ರೀರಾಮಕೃಷ್ಣರು ರೂಪಿಸಿದ ವಿಧಾನ ಅತುಲನೀಯವಾದದ್ದು. ಮೇಧಾವಿ ಮಾಸ್ಟರ್ ತನ್ನ ಸಂಸಾರದ ದುಃಖದಿಂದಲೂ, ಖಿನ್ನತೆಯಿಂದಲೂ ನೊಂದು ತನ್ನ ಜೀವನವನ್ನು ಕೊನೆಗೊಳಿಸಬೇಕೆಂದು ನಿರ್ಧರಿಸಿಕೊಂಡಿದ್ದ. ಇಂತಹವನನ್ನು ಪರಿವರ್ತಿಸಿ, ಅವನ ನಕಾರಾತ್ಮಕ ವಿಚಾರಸರಣಿಯನ್ನು ತುಂಡರಿಸಿ, ತಮ್ಮ ದಿವ್ಯವಾಣಿಯನ್ನು ಸೆರೆಹಿಡಿದು ಮುಂಬರುವ ಪೀಳಿಗೆಗೆ ದಾರಿದೀಪವಾಗಿ ಬೆಳಗುವ ವಚನವೇದದ ಕರ್ತೃವನ್ನಾಗಿ ಮಾಡಿದ ಮಹಾನ್ ವೈದ್ಯರು ಶ್ರೀರಾಮಕೃಷ್ಣರು.

> ''ವಚನವೇದ''ದಲ್ಲಿ ವರದಿಯಾಗಿರುವ ಶ್ರೀರಾಮಕೃಷ್ಣರ ಸಂಭಾಷಣೆಗಳು ಮನಮೋಹಕ ಮತ್ತು ಸ್ಫೂರ್ತಿದಾಯಕ. ಅದರ ಸಾಹಿತ್ಯಿಕ ಶೋಭೆಗೆ ಮೂಲ ಕಾರಣ ಶ್ರೀರಾಮಕೃಷ್ಣರ ಪ್ರೇರಕ, ಶುಭ್ರ ವ್ಯಕ್ತಿತ್ವ.
>
> — *ಮಹಮ್ಮದ್ ದಾಊದ್ ರಹ್‌ಬಾರ್.*

ಶ್ರೀರಾಮಕೃಷ್ಣರು ಮಾನವನ ಮನಸ್ಸಿನ ಸ್ವಭಾವವನ್ನು ಅತ್ಯಂತ ವೈಜ್ಞಾನಿಕ ರೀತಿಯಲ್ಲಿ ವಿವರಿಸಿರುವರು. ಯಾವಾಗ ಮನುಷ್ಯ ತನ್ನ ಮನಸ್ಸಿನ ಆಳವನ್ನು ಅರಿಯಲು ಯತ್ನಿಸುವನೋ, ಆಗ ಅವನಿಗೆ ತನ್ನ ಮನಸ್ಸು ಅತ್ಯಂತ ಸೂಕ್ಷ್ಮರೂಪದ ವಾಸನಾ ಸಮೂಹಗಳಿಂದ ಕೂಡಿದೆ ಎಂಬ ಅರಿವು ಉಂಟಾಗುವುದು. ಯಾವಾಗ ಮನಸ್ಸು ಸಂಪೂರ್ಣವಾಗಿ ಸಾಧಕನ ವಶಕ್ಕೆ ಬಂದು ಪವಿತ್ರವಾಗುವುದೋ, ಆಗ ಆ ಶುದ್ಧ ಮನಸ್ಸೇ ಅವನಿಗೆ ಗುರುವಾಗುವುದು ಎಂದು ಶ್ರೀರಾಮಕೃಷ್ಣರು ಸ್ಪಷ್ಟಪಡಿಸಿರುವರು.

ಸುಪ್ತ ಮನಸ್ಸಿನಲ್ಲಿ ಅಡಗಿರುವ ಕಾಮವನ್ನು ಹೇಗೆ ಉದಾತ್ತೀಕರಿಸುವುದು ಎಂಬುದನ್ನು ಆಧುನಿಕ ಶಿಕ್ಷಣ ಪಡೆದ ತಮ್ಮ ಯುವಶಿಷ್ಯರ ಮನಮುಟ್ಟುವ ರೀತಿಯಲ್ಲಿ ವಿವರಿಸಿ ಅವರಿಗೆ ತರಬೇತಿ ನೀಡುತ್ತಿದ್ದರು. ಶಿಷ್ಯರು ಆಧ್ಯಾತ್ಮಿಕ ಸಂಪತ್ತನ್ನು ಪಡೆಯಬೇಕಾದರೆ ಕಾಮ-ಕಾಂಚನ ತ್ಯಾಗ ಎಷ್ಟು ಅವಶ್ಯಕ ಎಂಬುದನ್ನು ಅವರ ಮನಸ್ಸಿನಲ್ಲಿ ಮುದ್ರೆ ಒತ್ತುವ ರೀತಿಯಲ್ಲಿ, ತಮ್ಮ ಅಸದೃಶ ಪ್ರೇಮಪೂರಿತ ರೀತಿಯಲ್ಲಿ ಸ್ಪಷ್ಟಪಡಿಸುತ್ತಿದ್ದರು. ತಮ್ಮ ಶಿಕ್ಷಣ ಕ್ರಮದಲ್ಲಿ ಶ್ರೀರಾಮಕೃಷ್ಣರು ಎಂದಿಗೂ ನಕಾರಾತ್ಮಕವಾದ ತತ್ತ್ವಗಳನ್ನು ಬೋಧಿಸುತ್ತಿರಲಿಲ್ಲ. ಎಲ್ಲವೂ ವೈಜ್ಞಾನಿಕವಾಗಿಯೂ, ಸಮಂಜಸವಾಗಿಯೂ, ಅನುಷ್ಠಾನಯೋಗ್ಯವಾದ ಕ್ರಮಗಳೇ ಆಗಿದ್ದವು.

ಒಮ್ಮೆ ಶ್ರೀರಾಮಕೃಷ್ಣರ ಯುವಶಿಷ್ಯರಾದ ಹರಿ ಮಹಾರಾಜ್ (ಮುಂದೆ ಸ್ವಾಮಿ ತುರೀಯಾನಂದರು) ಸ್ತ್ರೀಯರು ಆಧ್ಯಾತ್ಮಿಕ ಸಾಧಕರಿಗೆ ಮಾರಕವಾಗಿರುತ್ತಾರೆ, ಆದ್ದರಿಂದ ಅವರನ್ನು

ದೂರವಿಡಬೇಕು ಹಾಗೂ ದ್ವೇಷಿಸಬೇಕು ಎಂದು ಅಭಿಪ್ರಾಯ ಪಟ್ಟಾಗ, ಶ್ರೀರಾಮಕೃಷ್ಣರು ಅವರನ್ನು ಎಚ್ಚರಿಸುತ್ತಾರೆ : "ಸ್ತ್ರೀಯರನ್ನು ದ್ವೇಷಿಸಬೇಡ. ಅತಿಯಾಗಿ ದ್ವೇಷಿಸಿದರೆ ಅವರ ಬಲೆಗೆ ಬೀಳುವಿ ಜೋಕೆ!" ಇಲ್ಲಿ ಶ್ರೀರಾಮಕೃಷ್ಣರು ಸಾಧಕನಿಗೆ ಕೇವಲ ತಾತ್ಕಾಲಿಕವಾದ ಪರಿಹಾರವನ್ನು ಸೂಚಿಸಲಿಲ್ಲ. ಅವನ ಹೃದಯವು ವಿಶಾಲವಾಗುವಂತಹ, ಬುದ್ಧಿಯು ಪ್ರಖರವಾಗುವಂತಹ ಮನೋಭಾವವು ಹೇಗೆ ಅವನಲ್ಲಿ ಅನುಕ್ಷಣವೂ ರೂಪಗೊಳ್ಳಬೇಕೆಂಬುದನ್ನು ತೀವ್ರವಾಗಿಯೇ ತಿಳಿಸಿರುವರು. ಮುಂದೆ ಹರಿ ಮಹಾರಾಜರು ಅಮೆರಿಕಾದೇಶಕ್ಕೆ ಹೋಗಿ, ಅಲ್ಲಿಯ ಅನೇಕ ಸ್ತ್ರೀಯರು ಆಧ್ಯಾತ್ಮಿಕ ಜೀವನವನ್ನು ಕೈಗೊಳ್ಳಲು ಸ್ಫೂರ್ತಿ ನೀಡಿದ್ದನ್ನು ನೋಡಬಹುದು.

ಶ್ರೀರಾಮಕೃಷ್ಣರ ಗೃಹೀಭಕ್ತನಾದ ಮನಮೋಹನ ಮಿತ್ರ ಒಮ್ಮೆ ಅವರನ್ನು ಕುರಿತು ಭಗವಂತನು ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆಯೇ ಎಂಬುದಾಗಿ ಪ್ರಶ್ನಿಸಿದನು. ಶ್ರೀರಾಮಕೃಷ್ಣರು ಒಮ್ಮೆಲೇ ಭಾವಾವಿಷ್ಟರಾಗಿ ಹೇಳಿದರು : "ಏನು ನೀನು ಹೇಳುತ್ತಿರುವುದು? ನೀನು ಭಗವಂತನನ್ನು ಕರೆಯುತ್ತಿರುವೆ, ಆದರೆ ಅವನು ಅದನ್ನು ಕೇಳುತ್ತಿಲ್ಲ, ಹೌದೇ? ಅವನು ಸರ್ವಜ್ಞ, ಸರ್ವಶಕ್ತ. ಅವನು ನಿನ್ನ ಪ್ರಾರ್ಥನೆಯನ್ನು ಕೇಳಿಸಿಕೊಂಡಿಲ್ಲ ಎಂದು ನಿನಗೆ ಹೇಗೆ ಗೊತ್ತು? ನಿನಗೆ ಶ್ರದ್ಧೆ ಇಲ್ಲ. ನೀನು ಅವನಲ್ಲಿ ಸಂಶಯ ಹೊಂದಿರುವೆ. ಆದ್ದರಿಂದ ಹೀಗೆ ಹೇಳುತ್ತಿರುವೆ." ಆಗ ಮನಮೋಹನನಿಗೆ ತನ್ನ ಅಜ್ಞಾನದ ಅರಿವಾಗಿ ನಾಚಿಕೆಯಾಯಿತು. ತನ್ನ ಅಶ್ರದ್ಧೆಯನ್ನು ಕಂಡು ದುಃಖವಾಗಿ ಶ್ರೀರಾಮಕೃಷ್ಣರಲ್ಲಿ ಶರಣಾಗಿ ತನಗೆ ಶ್ರದ್ಧಾ-ಭಕ್ತಿ ಹೆಚ್ಚುವಂತೆ ಆಶೀರ್ವದಿಸಬೇಕೆಂದು ಬೇಡಿಕೊಂಡ. ಅನಂತರ ಅವನು ಶ್ರೀರಾಮಕೃಷ್ಣರನ್ನು ಕುರಿತು ಮತ್ತೊಂದು ಪ್ರಶ್ನೆ ಕೇಳಿದ—"ಮಹಾಶಯರೇ, ಭಗವಂತನಿಗಾಗಿ ನಾವು ಹಂಬಲಿಸುವುದನ್ನು ಹೇಗೆ ತೀವ್ರಗೊಳಿಸುವುದು ಎಂಬುದನ್ನು ತಿಳಿಸಿಕೊಡುವಿರಾ?" ಈ ಪ್ರಶ್ನೆಗೆ ಶ್ರೀರಾಮಕೃಷ್ಣರು ಕೊಟ್ಟ ಉತ್ತರ ಬಹುಶಃ ಶ್ರದ್ಧೆ-ಅಶ್ರದ್ಧೆಗಳ ನಡುವೆ ಡೋಲಾಯಮಾನ ಮನಸ್ಸುಳ್ಳ ನಮ್ಮೆಲ್ಲರಿಗೂ ಭರವಸೆಯನ್ನು ನೀಡುವ ಬೆಳಕಾಗಿರುವುದು. ಶ್ರೀರಾಮಕೃಷ್ಣರು ನೀಡಿದ ಉತ್ತರವಿದು: "ಎಲ್ಲರಿಗೂ ಹಸಿವು, ಬಾಯಾರಿಕೆ ಹೇಗೆ ಸಹಜವಾಗಿ ಉಂಟಾಗುವುದೋ ಹಾಗೆಯೇ ಭಗವಂತನ ಬಗ್ಗೆ ವ್ಯಾಕುಲತೆಯೂ ಸಹ ತಾನಾಗಿಯೇ ಉಂಟಾಗುವುದು. ಎಲ್ಲವೂ ಕಾಲವನ್ನು ಅವಲಂಬಿಸಿದೆ. ಭಗವಂತನ ಬಗ್ಗೆ ವ್ಯಾಕುಲತೆಯು ಸುಮ್ಮನೆ ಮನಸ್ಸಿನಿಂದ ಚಿಂತಿಸಿದರೆ ಬರುವುದಿಲ್ಲ. ಯಾವಾಗ ಒಬ್ಬನಿಗೆ ಭಗವಂತನೊಬ್ಬನೇ ಬೇಕಾಗುವನೋ, ಬೇರಾವುದೂ ಅವನಿಗೆ ಬೇಡವೆನಿಸುವುದೋ ಆಗ ಅವನಿಗೆ ಭಗವಂತನ ಬಗ್ಗೆ ವ್ಯಾಕುಲತೆ ಸಹಜವಾಗಿಯೇ ಉಂಟಾಗುವುದು.

ಭಗವಂತನಿಗಾಗಿ ಯಾರು ಹಾತೊರೆಯುವರೋ ಅವರಿಗೆ ಅವನು ನಿಜವಾಗಿ ದೊರೆಯುವನು. ಪ್ರತಿಸಂಜೆಯೂ, ಅವನನ್ನು ಆರ್ತನಾಗಿ ಕರೆ. ಆಗ ಅವನನ್ನು ನೀನು ನೋಡುವೆ." ಈ ದಿವ್ಯವಾಣಿಯನ್ನು ನಾವು ಅನುದಿನವೂ ನೆನೆದು, ಅದರಂತೆ ನಡೆದರೆ, ನಮ್ಮ ಹೃದಯಮಂದಿರದಲ್ಲಿ ಭಗವಂತನನ್ನು ಸ್ಥಾಪಿಸಿಕೊಳ್ಳಬಹುದೆಂಬ ದೃಢಸತ್ಯವು ಗೋಚರವಾಗುವುದು.

ಶ್ರೀರಾಮಕೃಷ್ಣರ ಕೆಲವೇ ಸ್ತ್ರೀಭಕ್ತರಲ್ಲಿ ಅತ್ಯಂತ ಧೀರಳೂ ಆಧ್ಯಾತ್ಮಿಕ ಸಾಧನೆಯಲ್ಲಿ ಬಹಳ ಮುಂದುವರೆದವಳೂ ಆದ ಗೌರೀಮಾ ಅಥವಾ ಗೌರ್‌ದಾಸಿ ಒಮ್ಮೆ ದಕ್ಷಿಣೇಶ್ವರದ ತೋಟದಲ್ಲಿ ಹೂಗಳನ್ನು ಕೀಳುತ್ತಿದ್ದಳು. ಆಗ ಶ್ರೀರಾಮಕೃಷ್ಣರು ಅವಳ ಬಳಿಗೆ ಬಂದು "ಗೌರೀ, ನಾನು ನೆಲಕ್ಕೆ ನೀರು ಹಾಯಿಸುತ್ತಿರುವೆ, ನೀನು ಮಣ್ಣನ್ನು ಹದಮಾಡಬೇಕು" ಎಂದರು. ಒಮ್ಮೆಲೇ ಅವಳಿಗೆ ಶ್ರೀರಾಮಕೃಷ್ಣರ ಮಾತಿನ ಭಾವವನ್ನು ಗ್ರಹಿಸಲಾಗಲಿಲ್ಲ. ನಂತರ ಶ್ರೀರಾಮಕೃಷ್ಣರು ನಗುತ್ತಾ, "ನಾನು ಏನು ಹೇಳಿದೆನೆಂದರೆ, ನಮ್ಮ ದೇಶದ ಸ್ತ್ರೀಯರು ಅತ್ಯಂತ ಹೀನ ಸ್ಥಿತಿಯಲ್ಲಿರುವರು. ನೀನು ಅವರಿಗಾಗಿ ದುಡಿಯಬೇಕು" ಎಂದರು. ಅವಳಿಗೆ ಅವರ ಈ ಆಲೋಚನೆ ಅಷ್ಟಾಗಿ ಹಿಡಿಸದಿದ್ದರೂ, ಅಗತ್ಯ ಬಿದ್ದರೆ ಮುಂದೆ ಎಳೆಯ ವಯಸ್ಸಿನ ಸ್ತ್ರೀಯರಿಗಾಗಿ ಹಿಮಾಲಯದಂತಹ ಪ್ರಶಾಂತ ಸ್ಥಳದಲ್ಲಿ ಆಧ್ಯಾತ್ಮಿಕ ತರಬೇತಿ ಕೇಂದ್ರವನ್ನು ನಡೆಸಲು ಒಪ್ಪಿಕೊಂಡಳು. ಅದಕ್ಕೆ ಶ್ರೀರಾಮಕೃಷ್ಣರು ಸ್ವಲ್ಪ ತೀವ್ರವಾಗಿಯೇ "ಇಲ್ಲ, ಇಲ್ಲ. ನೀನು ಇದೇ ನಗರದಲ್ಲಿ ನಿನ್ನ ಕಾರ್ಯವನ್ನು ಪ್ರಾರಂಭಿಸಬೇಕು. ನೀನು ಬೇಕಾದಷ್ಟು ಆಧ್ಯಾತ್ಮಿಕ ಸಾಧನೆ ಮಾಡಿರುವೆ. ಈಗ ನಿನ್ನ ಜೀವನವನ್ನು ಸ್ತ್ರೀಯರ ಸೇವೆಗಾಗಿ ಮುಡಿಪಾಗಿಡು. ಅವರು ಬಹಳ ಕಷ್ಟಪಡುತ್ತಿದ್ದಾರೆ" ಎಂದು ಒತ್ತಿ ಹೇಳಿದರು. ಹೀಗೆ ಗೌರೀಮಾ ಸ್ವತಂತ್ರವಾಗಿ ಆಧ್ಯಾತ್ಮಿಕ ಜೀವನವನ್ನು ನಡೆಸುತ್ತಾ ಅತ್ಯಂತ ಉನ್ನತ ಮಟ್ಟದ ಸಾಧನೆಯನ್ನು ಮಾಡಬೇಕೆಂಬ ಆಸೆಯನ್ನು ಬದಿಗೊತ್ತಿ, ಸ್ತ್ರೀಯರಿಗಾಗಿ ತನ್ನ ಜೀವನವನ್ನೇ ಮುಡಿಪಾಗಿಡುವಂತೆ ಮಾಡುವ ಶಕ್ತಿಯನ್ನು, ಉತ್ತೇಜನವನ್ನು ಶ್ರೀರಾಮಕೃಷ್ಣರು ಕೊಟ್ಟರು. ಕರ್ಮ ಹಾಗೂ ಧ್ಯಾನ ಜೀವನದ ಮಧುರ ಸಂಮಿಶ್ರದ ಈ ಆಲೋಚನೆಯು ಶ್ರೀರಾಮಕೃಷ್ಣರ ನವ ವೇದಾಂತದ ತತ್ತ್ವವಾಗಿದೆ.

ಶ್ರೀರಾಮಕೃಷ್ಣರು ಭಕ್ತರ ಕಲ್ಪತರು, ಆರ್ತರ ಬಂಧು, ಶರಣಾದವರ ಆಶ್ರಯ. ಎಲ್ಲಕ್ಕೂ ಮಿಗಿಲಾಗಿ ಭವರೋಗ ವೈದ್ಯರು. ಸಂಸಾರದಲ್ಲಿ ಬೆಂದು ಬಳಲಿದವರಿಗೆ ಸಂಜೀವಿನಿ. ಇಂತಹ ಶ್ರೀರಾಮಕೃಷ್ಣರನ್ನು ನೆನೆಯುವುದೇ ನಮ್ಮ ಕರ್ತವ್ಯ. ನಮ್ಮನ್ನು ರಕ್ಷಿಸುವುದು ಅವರ ಇಚ್ಛೆ. ಶ್ರೀರಾಮಕೃಷ್ಣರು ಸದಾ ನಮ್ಮೆಲ್ಲರನ್ನೂ ಕಾಪಾಡಲಿ ಎಂದು ಪ್ರಾರ್ಥಿಸೋಣ.

ಮಗು ತಾಯಿಗೆ ಹೇಳುತ್ತದೆ : "ಅಮ್ಮ, ನನಗೆ ಹಸಿವಾದಾಗ ನನ್ನನ್ನು ಎಚ್ಚರಗೊಳಿಸು."
ತಾಯಿ ಹೇಳಿದಳು : "ಮಗು, ಹಸಿವೇ ನಿನ್ನನ್ನು ಎಚ್ಚರಗೊಳಿಸುತ್ತದೆ." — ಶ್ರೀರಾಮಕೃಷ್ಣ.